ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರ್‌ಯವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 249.

ಮೃತಪಟ್ಟ ಕುರುಬರ ಮರಿಯಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೀರಪ್ಪ, ಮೈನರ್ ಯಿವನ ಗಾರ್ಡಿಯರ್ ದತ್ತು ತಾಯಿ ಮಾಯಮ್ಮನು ಮೃತಪಟ್ಟ ಸದರೀ ಮರಿಯಪ್ಪನವರಿಗೆ ದತ್ತು ಮಗ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜ ಮೊಹಲಾ ಸ್ಥಳದ ಸದರೀ ಮಾಯಮ್ಮನು ಸದರೀ ಮಾಸ ಸ್ಥರಾಗಿ ಮೃತಪಟ್ಟ ಮರಿಯಪ್ಪನವರ ಜೆಂದಗಿ ಬಗ್ಯಾಗಿ ಬರತಕ್ಕ 203—4—8 ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಾಯಮ್ಮನವರ ಅರ್ಜೀಯನ್ನು 1890ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಯಪ್ಪನವರ ಆಸ್ತಿಗೆ ಹಕ್ಕು ಸದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜೀ ನಂಬರ್ 250.

ಮೃತಪಟ್ಟ ಸಂಣಾಬಾಯಿಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಕಮಲಾಬಾಯಿ 2ನೇ ಕೃಷ್ಣಾಬಾಯಿ 3ನೇ ವೆಂಕೂಬಾಯಿ, ಇವರು ಮೈನರ್ ಇವರ ಗಾರ್ಡಿಯರ್ ಇವರ ಹೆತ್ತವ್ವ ಪಾರ್ವತೀಬಾಯಿ ಮೃತಪಟ್ಟ ಸದರೀ ಸಂಣಾಬಾಯಿಯವರಿಗೆ 1–2–3ನೇ ಮಕ್ಕಳು ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೆ ಸ್ಥಳದ ಸದರೀ ಪಾರ್ವತೀಬಾಯನ್ನು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಸಂಣಾಬಾಯಿಯವರ ಜೆಂದಗಿ ಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪಾರ್ವತೀಬಾಯಿಯವರ ಅರ್ಜೀಯನ್ನು 1890ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಂಣಾಬಾಯೀರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜೀ ನಂಬರು 251.

ಮೈಸೂರು ಡಿಸ್ಟ್ರಿಕ್ಟ್ ತಿರುಮಕೂಡ್ಲು ತಾಲ್ಲೂಕು ಹಿರಿಯೂರು ನಲ್ಲಿರುವ ಅರ್ಜೀದಾರ ಸೋಮಂಣನು ಮೈನರಾದ ಸದರೀ ವೂರು ಸ್ಥಳದ ಸೋಮಕ್ಕನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಸೋಮಕ್ಕನಿಗೆ, ಅರ್ಜೀದಾರನು ತಂದೆ ಆಗಬೇಕೆಂಬ ಹಕ್ಕಿನ ಮೇಲೆ ಸದರೀ ಹಿರಿಯೂರು ಸ್ಥಳದ ಸೋಮಂಣನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟು ಇರುತ್ತಾನೆ. ಸದರೀ ಅರ್ಜೀ ಹಿಯರಿಂಗ್ ಬಗ್ಯೆ 1890ನೇ ಇಸವಿ ನವಂಬರು ತಾರೀಖು 12ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟೀಸ್ ಕೊಡಲಾಗಿದೆ.

1890ನೇ ಇಸವಿ ಅರ್ಜೀ ನಂಬರ್ 252.

ಮೃತಪಟ್ಟ ಆನೆಕೆರೆ ಕೇಶವಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಭಾಗವ್ಮನವರು, ಮೃತಪಟ್ಟ ಸದರೀ ಕೇಶವಾಚಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಸನದ ಸ್ಥಳದ ಸದರೀ ಭಾಗವ್ಮನವರು ಚನ್ನರಾಯಪಟ್ಟಣದ ವಾಸಸ್ತರಾಗಿ ಮೃತಪಟ್ಟ ಕೇಶವಾಚಾರ್ರ ಜೆಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭಾಗವ್ಮನವರ ಆರ್ಜೀಯನ್ನು 1890ನೇ ಇಸವಿ ನವಂಬರು ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೇಶವಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜೀ ನಂಬರ್ 253.

ಮೃತಪಟ್ಟ ತಿರುಮಲೆಗವುಡ ಕಾಳೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕರೀಗವುಡರು ಮೃತಪಟ್ಟ ಸದರೀ ತಿರುಮಲೆಗವುಡ ಕಾಳೇಗವುಡರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಯಡತೊರೆ ತಾಲ್ಲೂಕು ಮಿರ್ಲೆ ಸ್ಥಳದ ಸದರೀ ಕರೀಗವುಡರು ಸದರೀ ವಾಸಸ್ಥನಾಗಿ ಮೃತಪಟ್ಟ ತಿರುಮಲೇಗವುಡ ಕಾಳೇಗವುಡರ

ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕರೀಗವ್ವಡರ ಅರ್ಜೀಯನ್ನು 1890ನೇ ಇಸವಿ ನವಂಬರ್ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ, ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುಮಲೇಗವ್ವಡ ಕಾಳೇಗವ್ವಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜೀ ನಂಬರ್ 254.

ಮೃತಪಟ್ಟ ಪಾಪಯ್ಯಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಲಕ್ಷ್ಮೀನಾರಣಶೆಟ್ಟಿ 2ನೇ ಕೃಷ್ಣಶೆಟ್ಟಿ ಸಹಾ ಮೃತಪಟ್ಟ ಸದರೀ ಪಾಪಯ್ಯಶೆಟ್ಟರಿಗೆ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಲಕ್ಷ್ಮೀನಾರಣಶೆಟ್ಟಿ ಕೃಷ್ಣಶೆಟ್ಟಿ ಸಹ ಸದರೀ ವಾಸಸ್ಥನಾಗಿ ಮೃತಪಟ್ಟ ಪಾಪಯ್ಯಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ಲಕ್ಷ್ಮೀನಾರಣಶೆಟ್ಟಿ ಕೃಷ್ಣಶೆಟ್ಟರ ಅರ್ಜೀಯನ್ನು 1890ನೇ ಇಸವಿ ನವಂಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಪಯ್ಯಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜೀ ನಂಬರ್ 255.

ಮೃತಪಟ್ಟ ಬೋರೇಗವ್ವಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಚಿಕ್ಕಲಿಂಗೇಗವ್ವಡನು ಮೃತಪಟ್ಟ ಸದರೀ ಬೋರೆಗವ್ವಡನಿಗೆ ಅಂಣನ ದತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮಂಡ್ಯದ ತಾಲ್ಲೂಕು ಹುಟ್ಟುಗೆರೆ ಸ್ಥಳದ ಸದರೀ ಚಿಕ್ಕಲಿಂಗೇಗವ್ವಡನು ಸದರೀ ವಾಸಸ್ಥನಾಗಿ ಮೃತಪಟ್ಟ ಬೋರೇಗವ್ವಡರ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚಿಕ್ಕಲಿಂಗೇಗವ್ವಡನ ಅರ್ಜೀಯನ್ನು 1890ನೇ ಇಸವಿ ನವಂಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೋರೇಗವ್ವಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಆರ್ಜೀ ನಂಬರ್ 260.

ಮೃತಪಟ್ಟ ಆದೆಪ್ಪಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಆದೆಪ್ಪ 2ನೇ ಬಸವಶೆಟ್ಟಿ ಇವರುಗಳು ಮೈನರ್ ಗಾರ್ಡಿಯರ್ ಆದ ಮ್ಮನು ಮೃತಪಟ್ಟ ಸದರೀ ಆದೆಪ್ಪಶೆಟ್ಟರಿಗೆ ಮಗ ಮುಮ್ಮಗ ಸೊಸೆ ಸಹ ಆಗಬೇಕೆಂಬ ಹಕ್ಕುದಾರಿ ಮೇಲೆ ಯಡತೊರೆ ತಾಲ್ಲೂಕು ಕಸಬಾ ಹೋಬಳಿ ಚವಕಹಳ್ಳಿ ಸ್ಥಳದ ಸದರೀ ಸಿದ್ದಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಆದೆಪ್ಪಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಸಿದ್ದಮ್ಮನವರ ಅರ್ಜೀಯನ್ನು 1890ನೇ ಇಸವಿ ನವಂಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆದೆಪ್ಪಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಸೆಪ್ಟಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತೊಡನೆ ಕೊಡೋಣಾಗಿದೆ.

ಸಿ. ಶ್ರೀನಿವಾಸಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ನೋಟಿಫಿಕೇಷನ್

1ನೇ ಸೆಪ್ಟಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮಾರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡ್ಲೇ ಬರದುಕೊಳ್ಳತಕ್ಕದ್ದು ಈ ಆನೆಯನ್ನ ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.